## ಬಾಟಲಿ



ಕೆರೆ ಬಾವಿಗಳು
ತುಂಬಿ ಹೋಗಿವೆ,
ಖಾಲಿ ನೀರಿನ ಬಾಟಲಿಯಿಂದ!

★ ಬಾಲು ಪಟಗಾರ

‘ಮತ್ತೆ ನೀನು ಧ್ಯಾನಸ್ಥ ಸ್ಥಿತಿಗೆ ತಲುಪಿದ್ಯನಾ? ಇದೆಲ್ಲಾ ಯಾವಾಗಿನ ಬೆಳವಣಿಗೆನಾ? ನನ್ನ ಜೊತೆಗೆ ಇರುವಾಗಲೂ ನೀನು ಎಲ್ಲೋ ಕಳೆದು ಹೋದರೆ ನಾನಿನ್ನು ಊರಿಗೆ ಬರುವುದನ್ನೇ ನಿಲ್ಲಿಸ್ತೇನೆ. ಆಯ್ತಾ?’ ಪ್ರಣೀತಾಳ ಮಾತಿನಿಂದ ನನಗೆ ಆಘಾತವಾಯಿತು. ಸುಧಾರಿಸಿಕೊಂಡೆ. ಅವಳಿಂದ ದೂರವಾಗುವುದು ಮತ್ತು ಅವಳನ್ನು ಬಿಟ್ಟುಕೊಡುವುದು ನನ್ನಿಂದ ಆಗದ ಮಾತುಗಳು ಅಂದುಕೊಂಡಿದ್ದೆ. ಅವಳಲ್ಲಿರುವ ನನ್ನ ಸೆಳೆತ ಕಾಮದಲ್ಲಿದ್ದದ್ದೇ ನಾನು ಈ ನಿರ್ಧಾರಕ್ಕೆ ಬರಲು ಕಾರಣವೇ? ಅವಳು ನನಗೇನಾಗಬೇಕು? ಇಪ್ಪತ್ತು ವರ್ಷಗಳ ಹಿಂದೆ ನನ್ನ ಕಾಲೇಜ್‌ಮೇಟ್ ಆಗಿದ್ದಳು. ನನ್ನ ಸ್ನೇಹಿತೆಯಾಗಿದ್ದಳು ಅನ್ನುವುದನ್ನು ಬಿಟ್ಟರೆ... ಅವಳೇನು ನನಗೆ? ಅವಳು ‘ಗಣೇಶನನ್ನು ಭೇಟಿಯಾದೆ, ಅವನ ಜೊತೆಗೆ ತಿರುಗಾಡಿದೆ, ಅವನ ಮನೆಗೆ ಹೋಗುತ್ತೇನೆ’ ಅನ್ನುವಾಗಲೆಲ್ಲಾ ನಾನ್ಯಾಕೆ ‘ಡಿಸ್ಟರ್ಬ್’ ಆಗಿ ಬಿಡುತ್ತೇನೆ? ಆಗ ನನಗನಿಸಿದ್ದು, ‘ನಾವೆಲ್ಲರೂ ತಿಳಿದಿರುವ ಹಾಗೆ ನಾವೆಲ್ಲ ಬಯಸುವುದರ ಕೊನೆಯ ಗುರಿಯೇ ಸುಖ ಪಡೆಯಬೇಕೆನ್ನುವ ಆಕಾಂಕ್ಷೆ. ಯಾವುದೇ ವ್ಯಕ್ತಿಯನ್ನು ಯಾವುದೇ ಸಂದರ್ಭದಲ್ಲಿ ಅವನ ಕೆಲಸದ ಕುರಿತಾದ ಪ್ರಶ್ನೆ ಎದುರಾದಾಗ ಅಲ್ಲಿಯೂ ಸಿಗುವ ಉತ್ತರ ಸುಖದ ಪ್ರಾಪ್ತಿ. ಇದೇ ಕಾಮವೇ? ಹಾಗಾಂದರೆ ಇಂತಹ ಸುಖ ನಮ್ಮಲ್ಲಿ ದೀರ್ಘಕಾಲ ಉಳಿದಿದೆಯೆ? ಸಂಬಂಧಗಳ ಕ್ಲಿಷ್ಟ ಬಂಧಗಳೊಳಗೆ, ಈ ಸುಖದ, ಕಾಮದ ವಾಂಛೆಯನ್ನು ಹುಡುಕಿದಷ್ಟೂ ಬೆಳೆಯುತ್ತಾ ಹೋಗುವ, ಧುತ್ತನೇ ಎಲ್ಲೋ ಒಂದು ಕಡೆ ನಿಲ್ಲಿಸಿ ಬಿಡುವ ಪೂರ್ಣವಿರಾಮವೇ... ನನ್ನೊಳಗೆ ಹುಟ್ಟಿಕೊಂಡ ಈ ಕಾಮದ ತೃಷೆ... ಪ್ರಣೀತಾಳಲ್ಲಿಯೂ ಇದ್ದುದರಿಂದಲೇ ಅವಳು ತನ್ನ ದೇಹದ ಸ್ವಾಯತ್ತತೆಯನ್ನು ಖಾಸಗಿತನದ ಹಕ್ಕುಗಳಲ್ಲಿ ಕಂಡುಕೊಂಡಿರುವುದೇ? ಕಾಮಕ್ಕೆ ಹೆಣ್ಣು ಗಂಡು ಎನ್ನುವ ಭೇದವಿಲ್ಲ. ನಾವೇನು ತಿನ್ನುತ್ತಿದ್ದೇವೆ, ನಾವು ಹೇಗೆ ಬಟ್ಟೆ ಧರಿಸುತ್ತಿದ್ದೇವೆ, ನಾವು ನಮ್ಮ ವೈಯಕ್ತಿಕ ಬದುಕಿನಲ್ಲಾಗಲೀ, ಸಮಾಜಿಕ ಇಲ್ಲವೇ ರಾಜಕೀಯ ಬದುಕಿನಲ್ಲಾಗಲೀ ಯಾರೊಂದಿಗೆ ಸ್ನೇಹ ಸಂಬಂಧ ಇಟ್ಟುಕೊಳ್ಳುತ್ತಿದ್ದೇವೆ ಎಂಬುವುದನ್ನು ಪ್ರಭುತ್ವ ನಿರ್ಧರಿಸಬೇಕು ಎನ್ನುವುದು ಎಷ್ಟು ಸರಿ? ಹೌದು, ಇದೇ ನನ್ನನ್ನು ಪ್ರಣೀತಾಳನ್ನು ಹತ್ತಿರಕ್ಕೆ ತಂದದ್ದು. ಹಾಗಾದರೆ ಅವಳು ಊರಿಗೆ ಬಂದಷ್ಟು ಸಾರಿ ಗಣೇಶನೇಕೆ ದುಬೈನಿಂದ ಹಾರಿ ಬರ್ತಾನೆ? ಅವನು ಬರುವಾಗಲೆಲ್ಲಾ ಇವಳು ನನ್ನನ್ನು ಭೇಟಿಯಾಗುವುದಕ್ಕೆ ಬರುತ್ತಿದ್ದೇನೆ ಅನ್ನುತ್ತಿದ್ದಾಳಲ್ಲಾ? ಅವಳ ಖಾಸಗಿತನದ ಹಕ್ಕಿನ ಮೇಲೆ ನಾನ್ಯಾಕೆ ನೈತಿಕ ಹಕ್ಕು ಸ್ಥಾಪಿಸಬೇಕು? ಅವಳ ಇಚ್ಛೆಗೆ ವಿರುದ್ಧವಾಗಿ ನಾನ್ಯಾಕೆ ತಡೆಯೊಡ್ಡಬೇಕು?



‘ನನ್ನ ದೇಹದ ಮೇಲೆ ನನಗೆ ಹಕ್ಕಿಲ್ವನಾ? ಖಾಸಗಿತನವೆಂದರೆ ನನ್ನ ದೇಹ, ಮನಸ್ಸು ಮತ್ತು ನನ್ನ ಅತ್ಯಾಪ್ತ ಆಯ್ಕೆಗಳನ್ನು ಒಳಗೊಂಡಿರುವಂತದ್ದು. ನನ್ನ ಮನಸ್ಸು ನಿನ್ನನ್ನು ಬಯಸಿದರೆ ತಪ್ಪೇನಿದೆ? ನಾನು ನನ್ನ ಗಂಡನಿಗೆ ಮೋಸ ಮಾಡ್ತಿದ್ದೇನೆ ಅನ್ನುವ ತಾರ್ಕಿಕತೆ ನಿನ್ನಲ್ಲಿದ್ದರೆ... ನೀನು ಮಾಡುತ್ತಿರುವುದಾದರೂ ಏನು? ನೀನು ನಿನ್ನ ಹೆಂಡತಿಗೆ ಮೋಸ ಮಾಡುತ್ತಿಲ್ಲವೇ? ನೀನು ಯಾವತ್ತಿದ್ದರೂ ನಿನ್ನ ಹೆಂಡತಿಯ ಹತ್ತಿರ ನನ್ನ ಬಗ್ಗೆ ಹೇಳಿದ್ದೀಯನಾ?’ ಪ್ರಣೀತಾಳ ಪ್ರಶ್ನೆಗೆ ಉತ್ತರಿಸದಾದೆ. ನಾನು ಅವಳ ಬಗ್ಗೆ ಹೆಂಡತಿಯ ಹತ್ತಿರ ಹೇಳಿಕೊಂಡದ್ದಿದೆ. ಆದರೆ ನನ್ನ ಅವಳ ಭಾವನಾತ್ಮಕ ಸಂಬಂಧಗಳಾಚೆಗಿನದ್ದು ಹೇಳಲು ಆಗಲಿಲ್ಲ. ಹೇಳುವುದಿಲ್ಲ ಕೂಡ. ನನ್ನ ನಿರುತ್ತರಕ್ಕೆ ಅವಳೇ ಏನೋ ಉತ್ತರ ಕಲ್ಪಿಸಿಕೊಂಡಿರಬೇಕು.

‘ನೋಡು, ನಮ್ಮ ಘನತೆ, ಸ್ವಾಯತ್ತತೆ, ಸ್ವಾತಂತ್ರ್ಯಗಳಲ್ಲಿ ಇರುವಂತದ್ದೇ ಖಾಸಗಿತನ. ನಿನ್ನ ಮಾತು, ಸಂಗ, ಚಲನವಲನ, ವ್ಯಕ್ತಿಗತ ಸ್ವಾತಂತ್ರ್ಯ, ಆತ್ಮಸಾಕ್ಷಿಯ ಸ್ವಾತಂತ್ರ್ಯಗಳಿಂದ ಅದನ್ನು ಬೇರೆ ಮಾಡುವುದಕ್ಕೆ ಸಾಧ್ಯವಿದೆಯಾ ನೋಡು. ಒಂದು ಗಂಡಿಗಿಲ್ಲದ ವಿಧಿಗಳು ಹೆಣ್ಣಿಗೆ ಮಾತ್ರ ಯಾಕೆ?’ ಅವಳ ವಾದದೆದುರು ನಾನು ಸೋತು ಹೋದೆ.

ಪದ್ಮಾ ಸತ್ತ ವಿಷಯ ತಿಳಿದು ಅಂಜನಪ್ಪ ಓಡಿಕೊಂಡು ಬಂದಿದ್ದನಂತೆ. ದೊಡ್ಡಮ್ಮ ಪದ್ಮಾಳನ್ನು ಕಳೆದುಕೊಂಡ ದುಃಖದಲ್ಲಿ ಅವನ ಎದುರಿಗೆ, ‘ಎಲ್ಲದಕ್ಕೂ ಇವಳೇ ಕಾರಣ’ ಅಂತ ಪರೋಕ್ಷವಾಗಿ ಶುಭಾ ಮತ್ತು ಅಂಜನಪ್ಪನೇ ಕಾರಣವೆನ್ನುವಂತೆ ಹೇಳಿ ಅತ್ತರಂತೆ. ಅಂಜನಪ್ಪ ಮುಗ್ಧನಂತೆ ನಿಂತು ಬಿಟ್ಟರೆ, ಶುಭಾ, ‘ಅದು ನನ್ನ ಇಷ್ಟ. ಅವಳ ಸಾವಿಗೆ ನನ್ನನ್ಯಾಕೆ ಹೊಣೆ ಮಾಡ್ತೀರಿ?’ ಎಂದು ನೇರವಾಗಿ ಹೇಳಿ ಬಿಟ್ಟಾಗ ಅಂಜನಪ್ಪ ತಪ್ಪಿತಸ್ಥನಂತೆ ತಲೆತಗ್ಗಿಸಿ ನಿಂತಿದ್ದನಂತೆ. ಶುಭಾಳ ಜೊತೆಗಿನ ತನ್ನ ಸಂಬಂಧವೇ ಪದ್ಮಾಳಂತಹ ಮುಗ್ಧೆಯನ್ನು ಬಲಿ ತೆಗೆದುಕೊಂಡದ್ದೇ? ಅನ್ನುವ ಯೋಚನೆ ಅವನನ್ನು ಕಾಡದಿರಲಿಲ್ಲವೇನೋ? ಆಮೇಲೆ ಅವನು ದೊಡ್ಡಮ್ಮನ ಮನೆಗೆ ಬರುವುದನ್ನೇ ನಿಲ್ಲಿಸಿದಾಗ ಶುಭಾಳೇ ವಿಮಾ ಏಜೆನ್ಸಿದಾರಳಾಗಿ ಪಾಲಿಸಿ ಮಾಡುವ ನೆಪದಲ್ಲಿ ಅವನನ್ನು ಹುಡುಕಿಕೊಂಡು ಹೋಗಿ ಹಗರಣ ಸೃಷ್ಟಿಸಿದಳಂತೆ.

‘ನೀನು ಮನೆಗೆ ಬರದಿದ್ದರೂ ಪರವಾಗಿಲ್ಲ. ನನ್ನನ್ನು ಮರೆತು ಬಿಡಬೇಡ. ಎಲ್ಲಾದರೂ ಸರಿ ನಾವಿಬ್ಬರೂ ದೂರ ಹೋಗೋಣ. ನೀನು ಇದನ್ನು ನಿರಾಕರಿಸಿದರೆ ನಾನೂ ಪದ್ಮಾಳ ಹಾಗೆ...’ ಎಂದಳಂತೆ. ಇದರಿಂದ ಅಂಜನಪ್ಪ ನಿಜವಾಗಿಯೂ ಹೆದರಿರಬೇಕು. ಆ ಬಳಿಕ ಅವನೂ ನಿರ್ಧಾರಕ್ಕೆ ಬಂದು ದೊಡ್ಡಮ್ಮನ ಮನೆಗೆ ಬಂದಿದ್ದನಂತೆ. ಆ ಸಮಯದಲ್ಲಿ ಶುಭಾ ಮನೆಯಲ್ಲಿರಲಿಲ್ಲ. ದೊಡ್ಡಮ್ಮನ ಕೈಯಲ್ಲಿಯೇ ಮದುವೆಯ ಆಮಂತ್ರಣ ಕೊಟ್ಟು, ಕಾಲು ಹಿಡಿದು, ‘ಮದುವೆಗೆ ಬನ್ನಿ’ ಎಂದು ಹೇಳಿ ಹೋಗಿದ್ದ. ಆದರೆ ಅವನ ಮದುವೆಯ ವಿಷಯ ತಿಳಿದ ಶುಭಾ ಆಕಾಶ ಭೂಮಿ ಒಂದಾಗುವಂತೆ ಹಾರಾಡಿದಳಂತೆ. ಯಾವುದೋ ಲಾಡ್ಜ್‌ನಲ್ಲಿ ಡೆವಲಪ್‌ಮೆಂಟ್ ಆಫೀಸರ್ ಜೊತೆಗೆ ವ್ಯವಹಾರಕ್ಕೆಂದು ಕೋಣೆ ಮಾಡಿ ಅಂಜನಪ್ಪನನ್ನು ಕರೆಸಿಕೊಂಡು ಅವನ ಮೈ ಬೆವರಿಸಿಳಿದಳಂತೆ. ಅವನು ಊರು ಬಿಟ್ಟುಹೋದ. ಅವನ ಮದುವೆ ಮುರಿದು ಬಿತ್ತು ಅನ್ನೋದು ಮಾತ್ರ ಗೊತ್ತು. ಆದರೆ ಶುಭಾ ಧೃತಿಗೆಡಲಿಲ್ಲ. ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಿದಳು. ಅದಕ್ಕೆ ಮೈ ಇಳಿಸಿಕೊಂಡಳೆನ್ನುವ ಅಪವಾದಕ್ಕೂ ಗುರಿಯಾದದ್ದು. ಈಗಂತು ಕೇಳುವವರೇ ಇಲ್ಲದಂತೆ ಸಿಕ್ಕವರ ಜೊತೆಗೆ ವಿಮೆಯ ನೆಪದಲ್ಲಿ ಸುತ್ತುತ್ತಿದ್ದಾಳಂತೆ. ಇದು ಅಮ್ಮ ಹೇಳಿದ್ದಲ್ಲ. ಶುಭಾಳ ಜೊತೆಗೆ ಸುತ್ತಾಡುತ್ತಿದ್ದ. ವಿಷ್ಣುಮೂರ್ತಿ ಭಾವನೇ ಹೇಳಿದ್ದು. ಇದನ್ನು ಹೇಳಿಕೊಂಡು ಅವರು ಬೀಗುತ್ತಿದ್ದರು. ನಾನು ಏನೂ ಉತ್ತರಿಸದಾದೆ.

‘ನೀನು ಉತ್ತರಿಸದಿದ್ದರೆ ಇನ್ನು ಮುಂದೆ ನಾನು ಊರಿಗೆ ಬರುವುದಿಲ್ಲನಾ, ಎಂತ ಹೇಳು?’ ಪ್ರಣೀತಾ ನನ್ನನ್ನು ಒತ್ತಾಯಿಸಿದಾಗ ನಾನು ಮುಗುಳ್ನಕ್ಕೆ. ಅವಳ ಪ್ರಶ್ನೆಗೆ ಉತ್ತರಿಸಲು ನಾನೇ ಗೊಂದಲದಲ್ಲಿದ್ದೆ. ಅವಳು ಅವತ್ತು ಸಂಜೆ ನನ್ನೆದುರೇ ಗಣೇಶನಿಗೆ ಫೋನ್ ಮಾಡಿದಳು. ಗಣೇಶ ವಿಮಾನದಲ್ಲಿ ಬಂದಿಳಿದಂತೆ ಪ್ರತ್ಯಕ್ಷನಾದ. ಅವಳು ಏನೊಂದೂ ಹೇಳದೆ ಅವನ ಕಾರನ್ನೇರಿ ಹೊರಟೇ ಬಿಟ್ಟಳು. ನಾನು ಮಂಕನಂತೆ ನಿಂತೆ ಅವಳನ್ನೇ ನೋಡುತ್ತಾ...